ದಿನಾಂಕ 29 ನೇ ಅಕ್ಟೋಬರ್ 2022 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ

ನಿಪಿ 7 ರಂತೆ ನಾನು ನನ್ನ ಕುಟುಂಬದ ಒಪ್ಪಿಗೆ ಪತ್ರ ಸಲ್ಲಿಸಿ ಬ್ಯಾಂಕ್ ನಿಂದ ಸಾಲ ಪಡೆದಿದ್ದೇನೆ ಎಂದರೆ ಸರಿ. ನಿಪಿ 7 ಕ್ಕೆ ನನ್ನ ದೊಡ್ಡಪ್ಪನ ನಾಲ್ಕು ಜನ ಮಕ್ಕಳಾದ ಗುಂಡು ರಾವ್ , ಲಕ್ಷ್ಮಣ ರಾವ್ ಗೋಪಾಲ್ ರಾವ್ ಹಾಗೂ ಸೋಮಸುಂದರ್ ರವರ ಒಪ್ಪಿಗೆ ಪಡೆದು ನಿಪಿ 7 ಕ್ಕೆ ಅವರ ಸಹಿ ಪಡೆದಿದ್ದೇನೆ. ದಾವಾ ಸ್ವತ್ತು ನಮ್ಮ ಪಿತ್ರಾರ್ಜಿ ಆಸ್ತಿ. ನಿಪಿ 7 ಆದ ದಿನಾಂಕದಂದು ಅಂದರೆ 22.02.1989 ರಂದು ನನ್ನ ದೊಡ್ಡಪ್ಪನ ಮಕ್ಕಳು ಮಾತ್ರ ಹಾಜರಿದ್ದರು, ಅವರ ಮಕ್ಕಳು ಹಾಜರಿರಲಿಲ್ಲ ಹಾಗಾಗಿ ಅವರ ಸಹಿ ಪಡೆಯಲಿಲ್ಲ. ಆ ದಿನಾಂಕದಂದು ನನ್ನ ದೊಡ್ಡಪ್ಪನ ಮಕ್ಕಳ ಮಕ್ಕಳು ವಯಸ್ಕರಾಗಿದ್ದರು ಅಥವಾ ಅಪ್ರಾಪ್ತ ವಯಸ್ಕರಾಗಿದ್ದರೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ 8 ಅನ್ನು ಸರ್ಕಾರಕ್ಕೆ ನೀಡಿದ್ದೇನೊ ಇಲ್ಲವೊ ನನಗೆ ನೆನಪಿಲ್ಲ. ನಿಪಿ 8 ಅನ್ನು ಸಾಲ ಪಡೆಯಲು ಬ್ಯಾಂಕ್ ಗೆ ನೀಡಿರುತ್ತೇನೆ. ಬ್ಯಾಂಕ್ ಸಾಲದ ಪ್ರಯುಕ್ತ ನಾನು ನಿಪಿ 8 ಅನ್ನು ತಯಾರಿಸಿರುತ್ತೇನೆ ಎನ್ನುತ್ತಾರೆ.

ನಿಪಿ 10 ಸಿ ಆರ್ ಸಿ ಆಗಿದ್ದು, ಅದರಂತೆ ವತ್ಸಲ ನಾರಾಯಣ್ ರವರು ಮಾಲೀಕರು ಎಂದು ತೋರಿಸಲಾಗಿದೆ ಎಂದರೆ ಸರಿ. ಸದರಿ ಸ್ವತ್ತು ನನ್ನ ಹಾಗೂ ವತ್ಸಲ ನಾರಾಯಣ್ ರವರ ಜಂಟಿ ಆಸ್ತಿ, ಜಂಟಿ ಖಾತೆ ಮಾಡಿಸಿದ್ದೇವೆ ಎಂದರೆ ಸರಿಯಲ್ಲ, ಅದು ವತ್ಸಲ ನಾರಾಯಣ್ ರವರಿಗೆ ಮಾತ್ರ ಸೇರಿದ್ದು ಎನ್ನುತ್ತಾರೆ

ನಿಪಿ 12 ಸಿ ಆರ್ ಸಿ ಆಗಿದ್ದು, ಅದು ನನ್ನ ಹೆಸರಿನಲ್ಲಿದೆ. ನನ್ನ ತಂದೆಯಿಂದ ನನ್ನ ಹೆಸರಿಗೆ ಬಂದಿದೆ ಎನ್ನುತ್ತಾರೆ. ಸದರಿ ಸ್ವತ್ತು ನನ್ನ ಹಾಗೂ ವತ್ಸಲ ನಾರಾಯಣ್ ರವರ ಜಂಟಿ ಆಸ್ತಿ, ಜಂಟಿ ಖಾತೆ ಮಾಡಿಸಿದ್ದೇವೆ ಎಂದರೆ ಸರಿಯಲ್ಲ, ಅದು ನನ್ನ ವೈಯಕ್ತಿಕ ಸ್ವತ್ತು ನನಗೆ ಮಾತ್ರ ಸೇರಿದ್ದು ಎನ್ನುತಾರೆ. ಪ್ರತಿವಾದಿಯರು ಕಾಫಿ, ಮೆಣಸು ಬಳ್ಳಿಗಳನ್ನು ಹಾಳು ಮಾಡಿರುತ್ತಾರೆ ಆದ ಕಾರಣ ದಾವೆ ಸಲ್ಲಿಸಿದ್ದೇನೆ ಎನ್ನುತ್ತಾರೆ. ಆ ರೀತಿ ಬೆಳೆಗಳು ನಾಶವಾದ ಬಗ್ಗೆ ನಷ್ಟ ಪರಿಹಾರ ಒಂದು ಲಕ್ಷ ಕೇಳಿ ದಾವೆ ಸಲ್ಲಿಸಿದ್ದೇನೆ. ಪ್ರತಿವಾದಿಯರು ನಮ್ಮ ಮೇಲೆ ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿರುತ್ತಾರೆ ಆದ ಕಾರಣ ದಾವೆ ಸಲ್ಲಿಸಿದ್ದೇನೆ ಎನ್ನುತ್ತಾರೆ. ಪ್ರತಿವಾದಿಯರು ಆಗಾಗ ತೊಂದರೆ ನೀಡುತ್ತಿರುತ್ತಾರೆ ಹಾಗಾಗಿ ನಿರ್ಬಂಧಕಾಜ್ಞೆ ಆದೇಶ ಕೋರಿ ದಾವೆ ಸಲ್ಲಿಸಿರುತ್ತೇನೆ ಎನ್ನುತ್ತಾರೆ. ನನಗೆ ಘಟನೆಯ ದಿನ ಗಾಬರಿ ಆಗಿತ್ತು

ಆದ ಕಾರಣ ಆ ದಿನ ಸರಿಯಾಗಿ ನೆನಪಾಗಲಿಲ್ಲ ಒಂದುವರೆ ಲಕ್ಷ ಪರಿಹಾರ ಕೇಳಿದ್ದೆ. ಮರುದಿನ ನೆನಪು ಮಾಡಿಕೊಂಡು ಘಟನೆಯ ಬಗ್ಗೆ ವಿವರಣೆ ನೀಡಿರುತ್ತೇನೆ. ಈಗ ನೆನಪಾಗಿರುವ ಕಾರಣ ಒಂದು ಲಕ್ಷ ನಷ್ಟವಾಗಿದೆ ಎಂದು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುತ್ತಾರೆ.

ನಾನು ಅನಿಲ್ ಜಿ ರಾವ್ ರವರ ವಿರುದ್ಧ ಮಾತ್ರ ಈ ದಾವೆ ಸಲ್ಲಿಸಿದ್ದೇನೆ ಎನ್ನುತ್ತಾರೆ. ನಿಪಿ 13 ಫೋಟೋ ಅನಿಲ್ ಜಿ ರಾವ್ ರವರು ಜೆ ಸಿ ಬಿ ಯಿಂದ ನಮ್ಮ ತೋಟಕ್ಕೆ ಬಂದು ಗಿಡಗಳನ್ನು ಕೀಳುತ್ತಿದ್ದ ಬಗ್ಗೆ ನಾನೇ ತೆಗೆದ ಫೋಟೋ ಎನ್ನುತ್ತಾರೆ. ನಿಪಿ 13 ರಲ್ಲಿರುವ ಜಮೀನು ನನ್ನ ಪತ್ನಿಗೆ ಸೇರಿದ ಜಮೀನು ಎನ್ನುತ್ತಾರೆ. ನಾನು ಸಮಯೋಚಿತ ಪ್ರಜ್ಞೆ ಬಳಸಿ ಫೋಟೋ ತೆಗೆದಿರುತ್ತೇನೆ ಎನ್ನುತ್ತಾರೆ. ನಿಪಿ 13 ರಲ್ಲಿ ಅನಿಲ್ ಜಿ ರಾವ್ ಮತ್ತು ಜೆ ಸಿ ಬಿ ಚಾಲಕ ಇದ್ದಾರೆ ಎನ್ನುತ್ತಾರೆ. ಇಬ್ಬರೂ ಸಹ ಜೆ ಸಿ ಬಿ ಯಿಂದ ಹೊರಗೆ ಇದ್ದಾರೆ ಎನ್ನುತ್ತಾರೆ. ನಾನು ಹೋದಾಗ ಜೆ ಸಿ ಬಿ ಕೆಲಸ ಮಾಡುತ್ತಿತ್ತು. ನಾನು ಫೋಟೋ ತೆಗೆದಾಗ ಜೆ ಸಿ ಬಿ ನಿಂತಿತ್ತು ಎನ್ನುತ್ತಾರೆ. ನಿಪಿ 13 ಅನ್ನು ದೂರದಿಂದ ತೆಗೆಯಲಾಗಿದೆ ಆದ ಕಾರಣ ಅನಿಲ್ ಜಿ ರಾವ್ ರವರು ಕೋಪ ಮಾಡಿಕೊಂಡಿದ್ದರೋ ಇಲ್ಲವೊ ಗೊತ್ತಿಲ್ಲ. ಈಗ ಫೋಟೋ ನೋಡಿದಾಗ ಅನಿಲ್ ಜಿ ರಾವ್ ರವರು ಕೋಪ ಮಾಡಿಕೊಂಡಿರುವುದು ಕಾಣುತ್ತದೆ ಎನ್ನುತ್ತಾರೆ.

ಅನಿಲ್ ಜಿ ರಾವ್ ರವರು ಸರ್ವೆ ನಂ.187/14 ರಲ್ಲಿ ಜೆ ಸಿ ಬಿ ಯಿಂದ ಕೆಲಸ ಮಾಡಿರುತ್ತಾರೆ. ದಾವೆಯಲ್ಲಿ ನಾನು ಸರ್ವೆ ನಂ.187/14 ರನ್ನು ಮಾತ್ರ ತೋರಿಸಿದ್ದೇನೆ ಎನ್ನುತ್ತಾರೆ. ಅನಿಲ್ ಜಿ ರಾವ್ ರವರು ಅವರ ಸ್ವತ್ತಿನಲ್ಲಿ ಕೆಲಸ ಮಾಡಿಸಲು ಜೆ ಸಿ ಬಿ ತರಿಸಿರುತ್ತಾರೆ ನಮ್ಮ ಜಮೀನಿಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಕುಮ್ಮಕ್ಕಿನಿಂದ 2 ನೇ ಪ್ರತಿವಾದಿ ನಮ್ಮ ತೋಟಕ್ಕೆ ಬಂದಿದ್ದಾರೆ ಎಂದು ಈ ದಾವಾ ಪತ್ರದಲ್ಲಿ ಹೇಳಿದ್ದೇನೆ ಎಂದರೆ ಸರಿ ಈ ಹಂತದಲ್ಲಿ ಸಾಕ್ಷಿಯವರು ತನಗೆ ಸಮಯಾವಕಾಶ ಬೇಕೆಂದು ಕೇಳಿದ ಕಾರಣ ಸಮಯ ನೀಡಲಾಯಿತು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.